ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಬುಧವಾರ, ದಿನಾಂಕ : 04 ನೇ ಮಾರ್ಚ್, 2020

ಸಾಮೂಹಿಕ ವಿವಾಹ ಕಾರ್ಯಕ್ರಮದ ಸಂಪನ್ಮೂಲ

ಭರಿಸುವುದರ ಬಗ್ಗೆ

ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) -

32 (241) ಮಾನ್ಯ ಮುಜರಾಯಿ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ-

(ಅ) ಮುಜರಾಯಿ ಇಲಾಖೆಯ ಯಾವ ದರ್ಜೆಯ ದೇವಸ್ಥಾನಗಳಲ್ಲಿ ಸಾಮೂಹಿಕ ವಿವಾಹವನ್ನು ನೆರವೇರಿಸಲಾಗುವುದು ಮತ್ತು ಎಷ್ಟು ದೇವಸ್ಥಾನಗಳು ಈ ಕಾರ್ಯಕ್ರಮಕ್ಕೆ ಆಯ್ಕೆಯಾಗಿವೆ ;

(ಆ) ಪ್ರತಿ ಮದುವೆಗೆ ತಗಲುವ ಖರ್ಚುವೆಚ್ಚ ಎಷ್ಟು ಮತ್ತು ಪ್ರೋತ್ಸಾಹಧನ ನೀಡುವ ಕುರಿತು ಮಾಹಿತಿ ನೀಡುವುದು ;

(ಇ) ಸದರಿ ವಿವಾಹ ಕಾರ್ಯಕ್ರಮಕ್ಕೆ ಸಂಪನ್ಮೂಲಗಳನ್ನು ಭರಿಸುವ ಬಗೆ ಹೇಗೆ ಎಂಬುದರ ಮಾಹಿತಿ ನೀಡುವುದು ;

(ಈ) ಈಗಾಗಲೇ ಇಲಾಖೆ ವ್ಯಾಪ್ತಿಯ ದೇವಸ್ಥಾನಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅರ್ಚಕರು ಮತ್ತು ಸಿಬ್ಬಂದಿಗಳ ವೇತನಕ್ಕೆ ಮತ್ತಷ್ಟು ತೊಂದರೆಯಾಗುವುದಿಲ್ಲವೆ; ಅದನ್ನು ಸರಿದೂಗಿಸುವ ಕ್ರಮಗಳೇನು ;

(ಉ) ಸಾಮೂಹಿಕ ವಿವಾಹವನ್ನು ನಡೆಸುವ ದೇವಸ್ಥಾನಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರ ಬಗ್ಗೆ ಇಲಾಖೆಯ ಕ್ರಮಗಳೇನು ?